ಹೆಣ್ಣುಗಳನ್ನು ಮದ್ವೆ ಆದ ಮೇಲೆ ಊರಲ್ಲಿ ಆಗುವ ಮೆರವಣಿಗೆಯನ್ನು ಕುದುರೆಗಳ ಮೇಲೆ ಕೂರಿಸಿ ಮಾಡಬೇಕೆಂದು ಕೂತರು. ಆಗ ತುಕರಾಮಣ್ಣ ಮತ್ತು ಅವನ ಹಿತಚಿಂತಕರಿಗೆ ಎರಡು ಕುದುರೆಗಳನ್ನೆಲ್ಲಿಂದ ತರಬೇಕೆಂದು ಚಿಂತೆಯಾಯ್ತು. ಮಲ್ಲೂರಿನಲ್ಲಿ ಬೀಡುಬಿಟ್ಟಿದ್ದ ಕಿಳ್ಳೆಕ್ಯಾತರ ಕ್ಯಾಂಪಿನಿಂದ ಎರಡು ಕುದುರೆಗಳನ್ನು ತಂದಿದ್ದಾಯ್ತು.

ಧಾರೆಮುಹೂರ್ತದಲ್ಲಿ ಗ್ಯಾನಿಯ ಹೆಂಡತಿ ಸರಳಾಳನ್ನು ನೋಡಿದ ಊರವರು ದಂಗಾದರು. ಅಷ್ಟೊಂದು ಸುಂದರ ಹೆಣ್ಣನ್ನು ಅವರು ಇದುವರೆಗೂ ಕಂಡೇ ಇರಲಿಲ್ಲ. ಸರಳಾಳು ಬಹುನಯ ನಾಜೋಕಿನಿಂದ ಹಸೆಮಣೆ ಮೇಲಿದ್ದುದು ಕೆಲವರಿಗೆ ತುಂಬಾ ಹಿಡಿಸಿತು. ಯಾವ ತಕರಾರೂ ಇಲ್ಲದೆ ಭಾರಿ ಗಡಿಬಿಡಿಯಲ್ಲಿ ಊರವರಿಗೆ ಅರ್ಥವಾಗದ ಭಾಷೆಯಲ್ಲಿ ಗ್ಯಾನಿ ಮತ್ತು ಸರಳಾರ ಮದುವೆ ಆಯ್ತು. ಗ್ಯಾನಿ ತಾಳಿ ಕಟ್ಟುವಾಗ ಕೆಲವು ಹುಡುಗರು ಎಲ್ಲಿಗೆಲ್ಲಿಯ ಸಂಬಂಧವೆಂದು ಕಿಸಿಕಿಸಿಯಾಡಿದ್ದು ಬಿಟ್ಟರೆ ಅಹಿತಕರವಾದದ್ದೇನು ಆಗಲಿಲ್ಲ. ಸರಳಾ ಮಾತ್ರ ಮುಹೂರ್ತವಾದ ಕೂಡಲೇ ಕೋಣೆ ಸೇರಿ ಅಳುತ್ತಾ ಮಲಗಿಬಿಟ್ಟಿದ್ದಳು. ಅವರಮ್ಮ 'ಏಳೆ ಗುಲಾಬಿ... ಹಾಗೆಲ್ಲ ಮಾಡ್ಬಾರ್ದು' ಎಂದು ಎಷ್ಟು ಕೇಳಿದರೂ ಜಪ್ಪೆನ್ನಲಿಲ್ಲ. ಸರಳಾ ಎಂದು ಅವಳ ಹುಟ್ಟು ಹೆಸರಾಗಿದ್ದರೂ ಕೆಂಪ ಕೆಂಪಗಿನ ಅವಳ ಕೆನ್ನೆಗಳು, ಅವಳ ಮೈಕಟ್ಟು ಎಲ್ಲಾ ನೋಡಿದ ಒಬ್ಬರು ಗುಲಾಬಿ ಎಂದಿದ್ದರು. ಗುಲಾಬಿ ಎಂಬ ಹೆಸರು ಎಷ್ಟು ಹೊಂದಿಕೆಯಾಗಿತ್ತೆಂದರೆ ಎಲ್ಲರೂ ಸರಳ ಎಂಬ ಹೆಸರನ್ನೇ ಮರೆತಿದ್ದರು. ಸ್ವತಹ ಸರಳಾಳೇ ತನ್ನ ಹೆಸರು ಅದೇ ಹೌದೇ ಅನ್ನುವಷ್ಟು ಗುಲಾಬಿ ಖ್ಯಾತವಾಗಿತ್ತು. ಈಗ ಮದ್ವೆ ಆಗುವಾಗಷ್ಟೇ ಸರಳಾ ಎಂಬ ಹೆಸರು ಜ್ಞಾಪಕಕ್ಕೆ ಬಂದಿತ್ತು. ಹೀಗೆ ಗುಲಾಬಿಯಂತಿದ್ದ ಸರಳಾ, ಸರಳವಾಗಿದ್ದ ಗುಲಾಬಿ ಮಧ್ಯಾಹ್ನದಿಂದ ಅತ್ತು ಅತ್ತೂ ಸಂಜೆ ಅವರಿವರ ಬಲವಂತದಿಂದ ಊರಲ್ಲಿ ಆಗುವ ಮೆರವಣಿಗೆಗೆ ಸಿದ್ಧವಾದಳು.

ಸಾಮಾನ್ಯವಾಗಿ ಮದುವೆ ಮೆರವಣಿಗೆಗಳು ರಾತ್ರಿ ಎಂಟರ ಮೇಲೆ ನಡೆಯುತ್ತಿದ್ದವು. ವಾಲಗದವರು, ಪೆಟ್ರೋಮ್ಯಾಕ್ಸ್ ಹಿಡಿಯುವವರು ಗಡದ್ದಾಗಿ ಸಾರಾಯಿ ಕುಡಿದಿದ್ದರು. ಹಲಗೆ ಬಾರಿಸುವವರಿಂದ ಹಿಡಿದು ಪಟಾಕಿ ಹಚ್ಚುವವರಿಗೆಲ್ಲಾ ಗ್ಯಾನಿ ಧಾರಾಳವಾಗಿ ದುಡ್ಡು ಕೊಟ್ಟು ಕುಡಿದು ಮಜಾ ಮಾಡಿ ಎಂದು ಹೇಳಿದ್ದ. ಮೆರವಣಿಗೆ ಬಹು ವೈಭವದಿಂದ ಊರ ಆಚೆಯ ನರಸಿಂಹ ದೇವಸ್ಥಾನದಿಂದ ಹೊರಟಿತು. ಎರಡು ಕುದುರೆಗಳು ಉಂಡಾಡಿಗಳಾದ್ದರಿಂದ ಅವುಗಳಿಗೆ ಸರಿಯಾಗಿ ಲಗಾಮು ಹಾಕಿ ಹಿಡಿದುಕೊಳ್ಳಲಾಗಿತ್ತು. ಅವೆರಡು ಕುದುರೆಗಳು ಎತ್ತರದಲ್ಲಿ ಸ್ವಲ್ಪ ಹೆಚ್ಚು ಕಮ್ಮಿ ಇದ್ದವು. ಎತ್ತರದ ಕುದುರೆ ಮೇಲೆ ಗುಲಾಬಿಯನ್ನು ಗಿಡ್ಡ ಕುದುರೆಯ ಮೇಲೆ ಗ್ಯಾನಿಯನ್ನು ಕೂರಿಸಿದ್ದರಿಂದ ದೂರದಿಂದ ನೋಡಿದವರಿಗೆ ಗ್ಯಾನಿ ಕಾಣುತ್ತಲೇ ಇರಲಿಲ್ಲ. ಏಕೆಂದರೆ ಮೊದಲೇ ಗಿಡ್ಡ ಸಣಕಲು ಗ್ಯಾನಿ, ಎತ್ತರದ ಕುದುರೆ ಏರಿರುವ ಗುಲಾಬಿ ಪಕ್ಕ ಸರಿಸಮವಾಗಿರಲಿಲ್ಲ. ಇಷ್ಟೆಲ್ಲಾ ನ್ಯೂನತೆಗಳು ಸಂಭ್ರಮದ ಉನ್ಮಾದದಲ್ಲಿದ್ದ ತುಕರಾಮಣ್ಣ ತುಳುಜಕ್ಕರಿಗಾಗಲಿ ಹೆಣ್ಣಿನ ಕಡೆಯವರಿಗಾಗಲಿ ಅಥವಾ ಗ್ಯಾನಿ–ಗುಲಾಬಿಯರಿಗಾಗಲಿ ತಿಳಿಯುವಂತಿರಲಿಲ್ಲ. ಆದರೆ ಊರವರು ಬಾಯಿ ಮೇಲೆ ಬೆರಳಿಟ್ಟು ಸೋಜಿಗಪಡುವಂತೆ ಆ ಎರಡು ಕುದುರೆಗಳು ಊರೊಳಗೆ ಚಲಿಸತೊಡಗಿದ್ದವು. ವಾಲಗದವರು ಅತ್ಯಂತ ಕೊನೆಯದಾಗಬಹುದಾದ ರಾಗದಿಂದ ಉರುಲುತ್ತಿದ್ದರು. ಹಲಗೆಯವರು ಜೋಡುಹಲಗೆ ಬಾರಿಸಲು ತೊಡಗಿದ್ದರು. ಇವುಗಳ ಶಬ್ದದಲ್ಲಿ ಮುಳುಗಿಹೋದ ಕುದುರೆಗಳನ್ನು ಹಿಡಿದವನು ಸ್ವಲ್ಪ ಆಕಡೆ ಈಕಡೆ ತಿರುಗಿದ್ದ. ಇದೇ